ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
भारतीय विज्ञान संस्थान, बैंगलोर
Indian Institute of Science
Bangalore 560 012
Ph: 22932232 email: recruitment.nt@iisc.ac.in

---

**ಆಡಳಿತ ಸಹಾಯಕರ ಹುದ್ದೆಗಳ ಅಧಿಸೂಚನೆ**

**ಜಾಹಿರಾತು ಸಂಖ್ಯೆ: R(HR)/Recruitment-1/2020** **ದಿನಾಂಕ:** ೧೧.೧೦.೨೦೨೦

ಹುದ್ದೆಗಳ ಸಂಖ್ಯೆ: ೮೫ (ಮೀಸಲಿರದ ಹುದ್ದೆಗಳು -UR-37, OBC-22, SC-13, ST-5, EWS-8) (ಗ್ರೂಪ್ ಸಿ) ನಾಲ್ಕು ಹುದ್ದೆಗಳು ವಿಕಲಚೇತನರಿಗೆ ಮೀಸಲಾಗಿವೆ. ಇವುಗಳಲ್ಲಿ ತಲಾ ಒಂದೊಂದು VH, HH, OH ಮತ್ತು ಆಟಿಸಂ ಇರುವ, ಬೌದ್ಧಿಕ ವಿಕಲಾಂಗತೆ, ಕಲಿಕೆಯ ನಿರ್ದಿಷ್ಟ ವಿಕಲಾಂಗತೆ, ಹಲವು ವಿಕಲಾಂಗತೆಗಳಿರುವ ನಿಯಮ (ಎ)ಯಿಂದ (ಡಿ)ತನಕ, ಕಿವುಡರು-ಅಂಧರು ಸೇರಿದಂತೆ, ಅಭ್ಯರ್ಥಿಗಳಿಗೆ ಮೀಸಲಾಗಿದೆ.

ವಿದ್ಯಾರ್ಹತೆ: ಕನಿಷ್ಠ ಶೇಕಡಾ ೫೦ರಷ್ಟು ಪದವಿಯಲ್ಲಿ ತೇರ್ಗಡೆ (ಭಾಷಾ ವಿಷಯಗಳೂ ಸೇರಿದಂತೆ)

ವಯೋಮಿತಿ: ೦೭.೧೧.೨೦೨೦ರಂತೆ ೨೬ ವರ್ಷಗಳು.

ವೇತನ ಶ್ರೇಣಿ ಮತ್ತು ಮಟ್ಟ: ಲೆವೆಲ್-೩ - ಮೂಲವೇತನ ೨೧,೭೦೦ ರೂಪಾಯಿಗಳು (ಸೆಲ್ ೧) ಮತ್ತು ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ದರಗಳಂತೆ ಭತ್ಯೆಗಳು

ಪರಿಶಿಷ್ಟ ಜಾತಿ/ಪಂಗಡ, ಒಬಿಸಿ, ವಿಕಲಾಂಗರು, ಮಾಜಿ ಸೈನಿಕರು ಮತ್ತು ಸಂಸ್ಥೆಯಲ್ಲಿ ಮೂರು ವರ್ಷ ಸೇವೆ ಸಲ್ಲಿಸಿರುವ ಗುತ್ತಿಗೆ/ಯೋಜನಾ ಸಿಬ್ಬಂದಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಕೊಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ, ನಮ್ಮ ಜಾಲತಾಣ **https://iisc.ac.in/positions-open** ಗೆ ಭೇಟಿ ನೀಡಿ.

ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ೦೭.೧೧.೨೦೨೦

ದಿನಾಂಕ: ೧೧.೧೦.೨೦೨೦ ಕುಲಸಚಿವರು

ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
भारतीय विज्ञान संस्थान, बैंगलोर
Indian Institute of Science
Bangalore 560 012
Ph: 22932232 email: recruitment.nt@iisc.ac.in

## ಆಡಳಿತ ಸಹಾಯಕರ ಹುದ್ದೆಗಳ ಅಧಿಸೂಚನೆ

ಜಾಹಿರಾತು ಸಂಖ್ಯೆ: R(HR)/Recruitment-1/2020 ದಿನಾಂಕ: ೧೧.೧೦.೨೦೨೦

ಹುದ್ದೆಗಳ ಸಂಖ್ಯೆ: ೮೫ (ಮೀಸಲಿರದ ಹುದ್ದೆಗಳು-೩೭, ಒಬಿಸಿ-೨೨, ಎಸ್ ಸಿ-೧೩, ಎಸ್ ಟಿ-೫, ಇಡಬ್ಲುಎಸ್-೮) (ಗ್ರೂಪ್ ಸಿ) ನಾಲ್ಕು ಹುದ್ದೆಗಳು ವಿಕಲಚೇತನರಿಗೆ ಮೀಸಲಾಗಿವೆ. ಇವುಗಳಲ್ಲಿ ತಲಾ ಒಂದೊಂದು VH, HH, OH ಮತ್ತು ಆಟಿಸಂ ಇರುವ, ಬೌದ್ಧಿಕ ವಿಕಲಾಂಗತೆ, ಕಲಿಕೆಯ ನಿರ್ದಿಷ್ಟ ವಿಕಲಾಂಗತೆ, ಹಲವು ವಿಕಲಾಂಗತೆಗಳಿರುವ ನಿಯಮ (ಎ)ಯಿಂದ (ಡಿ)ತನಕ, ಕಿವುಡರು-ಅಂಧರು ಸೇರಿದಂತೆ, ಅಭ್ಯರ್ಥಿಗಳಿಗೆ ಮೀಸಲಾಗಿದೆ.

ವಿದ್ಯಾರ್ಹತೆ: ಕನಿಷ್ಠ ಶೇಕಡಾ ೫೦ರಷ್ಟು ಪದವಿಯಲ್ಲಿ ತೇರ್ಗಡೆ (ಭಾಷಾವಿಷಯಗಳೂ ಸೇರಿದಂತೆ) ಮತ್ತು ಕಂಪ್ಯೂಟರ್ ಅಪ್ಲಿಕೇಷನ್‌ಗಳ ಜ್ಞಾನ ಇರಬೇಕು.

ವಯೋಮಿತಿ: ೦೭.೧೧.೨೦೨೦ರಂತೆ ೨೬ ವರ್ಷಗಳು.

ವಯೋಮಿತಿಯಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಅಭ್ಯರ್ಥಿಗಳಿಗೆ ಐದು ವರ್ಷಗಳು, ಒಬಿಸಿಯವರಿಗೆ (ಇತರ ಹಿಂದುಳಿದ ಜಾತಿಗಳು) ಮೂರು, ವಿಕಲಚೇತನ ಅಭ್ಯರ್ಥಿಗಳಿಗೆ ಹತ್ತು ಮತ್ತು ಮಾಜಿ ಸೈನಿಕರಿಗೆ ಸೇವೆ+೩ ವರ್ಷಗಳು ಸಡಿಲಿಕೆ ಇದೆ.

ಸೂಚಿತ (ಬೆಂಚ್‌ಮಾರ್ಕ್) ವಿಕಲಾಂಗತೆ ಇರುವ ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಪರಿಶಿಷ್ಟ ಜಾತಿ/ಪಂಗಡಗಳ, ಒಬಿಸಿಯ ಅಭ್ಯರ್ಥಿಗಳಿಗೆ ಮೀಸಲಾಗಿರುವ ಹುದ್ದೆಗಳಲ್ಲಿ ಸಂಚಿತ ವಯೋಮಿತಿ ಸಡಿಲಿಕೆ ಇದೆ.

ಮೂರು ವರ್ಷಗಳ ಕಾಲ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ಈಗಲೂ ಕಾರ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ/ಯೋಜನಾ ಸಿಬ್ಬಂದಿಗಳಿಗೆ ಅವರ ಸೇವಾವಧಿಗೆ ತಕ್ಕಂತೆ ಒಂದು ಬಾರಿಯ ವಯೋಮಿತಿ ಸಡಿಲಿಕೆ ಕೊಡಲಾಗುವುದು.

ವೇತನ ಶ್ರೇಣಿ ಮತ್ತು ಮಟ್ಟ: ಲೆವೆಲ್-೩ - ಮೂಲವೇತನ ೨೧,೭೦೦ ರೂಪಾಯಿಗಳು (ಸೆಲ್ ೧) ಮತ್ತು ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ದರಗಳಂತೆ ಭತ್ಯೆಗಳು.

ಕೆಲಸದ ಅಗತ್ಯತೆಗಳು:
ಅನುಬಂಧದಲ್ಲಿ ಕೊಟ್ಟಿರುವ ಕಾರ್ಯಗಳನ್ನು ಆಯ್ಕೆಯಾದ ಅಭ್ಯರ್ಥಿಗಳು ನಿರ್ವಹಿಸಬೇಕಾಗುತ್ತದೆ.

ಆಯ್ಕೆಯ ವಿಧಾನ:

ಲಿಖಿತ ಆಪ್ಟಿಟ್ಯೂಡ್ ಪರೀಕ್ಷೆ (ಶೇಕಡಾ ೮೦ ಅಂಕ) ಮತ್ತು ಪದವಿಯಲ್ಲಿ ಭಾಷಾವಿಷಯಗಳೂ ಸೇರಿದಂತೆ ಶೈಕ್ಷಣಿಕ ಸಾಧನೆ (ಶೇಕಡಾ ೨೦ ಅಂಕ) ಮೇಲೆ ಆಯ್ಕೆಯ ವಿಧಾನ ಆಧಾರಿತವಾಗಿದೆ.

ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿರುವ ಶೇಕಡಾವಾರು ಅಂಕಗಳಿಗೆ ಅನುಗುಣವಾಗಿ ಅವರ ಶೈಕ್ಷಣಿಕ ಸಾಧನೆಯ ಅಂಕಗಳ ಲೆಕ್ಕಾಚಾರ ಮಾಡಲಾಗುತ್ತದೆ. ಅಭ್ಯರ್ಥಿಗಳು ಅಂಕಗಳ ಬದಲಿಗೆ ಗ್ರೇಡ್‌ಗಳನ್ನು ಪಡೆದಿದ್ದರೆ ಅವುಗಳನ್ನು ತಮ್ಮ ವಿಶ್ವವಿದ್ಯಾಲಯ/ಸಂಸ್ಥೆಯ ಪರಿವರ್ತನಾ ಸೂತ್ರದ ಪ್ರಕಾರ ಗ್ರೇಡ್‌ಗಳನ್ನು ಅಂಕಗಳಿಗೆ ಪರಿವರ್ತಿಸಿ ಅರ್ಜಿಗಳನ್ನು ತುಂಬುವಾಗ ನಮೂದಿಸಬೇಕು. ಪ್ರಮಾಣ ಪತ್ರಗಳ ಪರಿಶೀಲನೆಯ ವೇಳೆ ಈ ಪರಿವರ್ತನಾ ಸೂತ್ರಕ್ಕೆ ದಾಖಲೆ/ಸಾಕ್ಷಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿ.

ಲಿಖಿತ ಆಪ್ಟಿಟ್ಯೂಡ್ ಪರೀಕ್ಷೆಯು ಬಹುಆಯ್ಕೆ (ಎಂಸಿಕ್ಯೂ) ಮಾದರಿಯದ್ದಾಗಿರುತ್ತದೆ. ಪರೀಕ್ಷೆಯ ವಿಧಾನ ಮತ್ತು ಪಠ್ಯಕ್ರಮವನ್ನು ಕೊನೆಯಲ್ಲಿ ಕೊಡಲಾಗಿದೆ.

ಶುಲ್ಕ:

| | |
|---|---|
| ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳು | ೮೦೦ ರೂಪಾಯಿಗಳು |
| ಮಹಿಳಾ ಮತ್ತು ಪರಿಶಿಷ್ಟ ಜಾತಿ/ಪಂಗಡ,<br>ವಿಕಲಾಂಗರು ಮತ್ತು ಮಾಜಿ ಸೈನಿಕರು | ೪೦೦ ರೂಪಾಯಿಗಳು |

ಒಮ್ಮೆ ಸಂದಾಯ ಮಾಡಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

ಷರತ್ತುಗಳು ಮತ್ತು ನಿಬಂಧನೆಗಳು

೧. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು.

೨. ಹುದ್ದೆಗಳ ನೇಮಕಾತಿಯು ನಿಯಮಿತ ಆಧಾರದಲ್ಲಿದ್ದು (ರೆಗ್ಯುಲರ್) ಎರಡು ವರ್ಷಗಳ ಪ್ರೊಬೇಷನ್ ಅವಧಿ ಒಳಗೊಂಡಿದೆ. ಆಯ್ಕೆಯಾದವರು ಸೂಪರ್‌ಆನ್ಯುಯೇಷನ್ (ನಿವೃತ್ತಿ) ಹೊಂದುವ ತಿಂಗಳ ಕೊನೆಯ ದಿನದವರೆಗೆ ಹುದ್ದೆಯ ನೇಮಕಾತಿ ಅನ್ವಯಿಸುತ್ತದೆ.

೩. ಅರ್ಜಿಯ ಜೊತೆಯಲ್ಲಿ ವಿದ್ಯಾರ್ಹತೆಯ ಅಂಕ ಪಟ್ಟಿಗಳು ಮತ್ತು ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡಿ ಸಲ್ಲಿಸತಕ್ಕದ್ದು (೧೦ನೆಯ ತರಗತಿಯಿಂದ ಆರಂಭಿಸಿ, ಪದವಿಯ ಪ್ರಮಾಣ ಪತ್ರದ ತನಕ, ಜಾತಿ, ಆದಾಯ, ಅನುಭವದ ಪ್ರಮಾಣಪತ್ರಗಳು ಎಲ್ಲವೂ ಸೇರಿ). ಸೂಕ್ತ ದಾಖಲೆಗಳು ಇಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಈ ಬಗ್ಗೆ ಯಾವುದೇ ವಿಚಾರಣೆಗೆ ಅವಕಾಶ ಇಲ್ಲ.

೪. ಫಲಿತಾಂಶಗಳನ್ನು ಪ್ರಕಟಿಸುವ ಮುನ್ನ ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಲ್ಲಿಸಿರುವ ವಿವರಗಳನ್ನು ಪರಿಶೀಲಿಸಲಾಗುತ್ತದೆ. ಅಭ್ಯರ್ಥಿಗಳು ತಾವು ಸಲ್ಲಿಸಿರುವ ವಿವರಗಳಿಗೆ ಅಧಿಕೃತ ದಾಖಲಾತಿಗಳನ್ನು ನೀಡಲು ವಿಫಲರಾದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

೫. ೦೧.೦೧.೨೦೦೪ನಂತರ ಸಂಸ್ಥೆಗೆ ಸೇರಿದ ಎಲ್ಲಾ ಉದ್ಯೋಗಿಗಳನ್ನು ನೂತನ ಪಿಂಚಣಿ ಯೋಜನೆಯಡಿ (ಎನ್‌ಪಿಎಸ್) ತರಲಾಗುತ್ತದೆ.

೬. ಸಂಸ್ಥೆಯ ವೃಂದ ಮತ್ತು ನೇಮಕಾತಿ (ಸಿ&ಆರ್) ನಿಯಮಗಳಿಗೆ ಅನುಸಾರ ಹುದ್ದೆಗಳಿಗೆ ನೇರ ನೇಮಕಾತಿ ಇದ್ದಾಗ ನಿರ್ದೇಶಕರ ವಿವೇಚನೆಯಂತೆ ನಿಯೋಜನೆ ಅಥವಾ ಗುತ್ತಿಗೆ ಆಧಾರದ ಮೇಲೆ ತುಂಬಲಾಗುತ್ತದೆ. ಸೇವಾವಧಿಯಲ್ಲಿ ಪ್ರತಿ ಉದ್ಯೋಗಿಯೂ ಯೋಜನೆ, ನಿಬಂಧನೆಗಳು, ಉಪವಿಧಿಗಳು, ಆಡಳಿತ ಮಾರ್ಗದರ್ಶಿಕೆಗಳು, ಇತರ ಶಾಸನಬದ್ಧ ದಾಖಲಾತಿಗಳು, ಸಿಸಿಎಸ್ ಮತ್ತು ಸಿಸಿಎಸ್ (ಸಿಸಿಎ) ನಿಯಮಗಳನ್ನು ಪಾಲಿಸಬೇಕು

೭. ಸೂಚಿತ (ಬೆಂಚ್‌ಮಾರ್ಕ್) ವಿಕಲಾಂಗತೆ ಇರುವ ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಪರಿಶಿಷ್ಟ ಜಾತಿ/ಪಂಗಡಗಳ, ಒಬಿಸಿಯ ಅಭ್ಯರ್ಥಿಗಳಿಗೆ ಮೀಸಲಾಗಿರುವ ಹುದ್ದೆಗಳಲ್ಲಿ ಸಂಚಿತ ವಯೋಮಿತಿ ಸಡಿಲಿಕೆ ಇದೆ.

೮. ಇಲ್ಲಿ ಸೂಚಿಸಲಾಗಿರುವ ಅರ್ಹತೆಗಳು ಕನಿಷ್ಠ ಅರ್ಹತೆಗಳು ಮತ್ತು ಅಭ್ಯರ್ಥಿಗಳು ಈ ಅರ್ಹತೆಗಳು ಇವೆ ಎಂದ ತಕ್ಷಣ ಅವರನ್ನು ಲಿಖಿತ ಪರೀಕ್ಷೆಗೆ ಕರೆಯಲಾಗುವುದು ಎಂದು ಭಾವಿಸಬೇಕಿಲ್ಲ.

೯. ಅಭ್ಯರ್ಥಿಗಳು ಕೇವಲ ಐಐಎಸ್ಸಿಯ ನೇರ ಪೋರ್ಟಲ್ಲಿನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬೇಕು. ಆನ್‌ಲೈನ್ ಮೂಲಕ ಸಲ್ಲಿಸಲಾದ ಅರ್ಜಿಗಳ ಪ್ರಿಂಟ್ ಔಟನ್ನು ಮುಂದಿನ ಪರಾಮರ್ಶೆಗಾಗಿ ತೆಗೆದಿಟ್ಟುಕೊಳ್ಳಬೇಕು.

೧೦. ಪ್ರಸ್ತುತ ಸರ್ಕಾರಿ/ಸಾರ್ವಜನಿಕ ಉದ್ದಿಮೆ/ಸ್ವಾಯತ್ತ ಸಂಸ್ಥೆಗಳ ಉದ್ಯೋಗಿಗಳು ಅರ್ಜಿ ಸಲ್ಲಿಸುವಾಗ ತಮ್ಮ ಉದ್ಯೋಗದಾತರಿಂದ ನಿರಪೇಕ್ಷಣಾ ಪ್ರಮಾಣ ಪತ್ರ (ಎನ್‌ಒಸಿ) ಆನ್‌ಲೈನಿನಲ್ಲಿ ಸಲ್ಲಿಸತಕ್ಕದ್ದು. ಆದರೂ ಅಭ್ಯರ್ಥಿಗಳು ಪ್ರಮಾಣಪತ್ರಗಳ ಪರಿಶೀಲನೆ ವೇಳೆಯಲ್ಲಿ ಎನ್‌ಒಸಿಯನ್ನು ಕೊಡುವುದಾಗಿ ಸಹಿ ಮಾಡಿದ ಮುಚ್ಚಳಿಕೆಯನ್ನು ಬರೆದು ಅದನ್ನು ಅಪ್‌ಲೋಡ್ ಮಾಡಿದರೆ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು.

೧೧. ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೆ ಕಾಯದೇ ಅರ್ಜಿಗಳನ್ನು ಸಲ್ಲಿಸಬೇಕು.

೧೨. ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯ ಕಾಲ್ ಲೆಟರ್‌ಗಳನ್ನು ಇ-ಮೇಲ್ ಮೂಲಕ ಮಾತ್ರ ಕಳಿಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಆಗಾಗ ತಮ್ಮ ಇಮೇಲ್ ನೋಡುತ್ತಿರಬೇಕು. ಲಿಖಿತ ಪರೀಕ್ಷೆ ಅರ್ಹತೆ ಪಡೆದಿರದ ಅಭ್ಯರ್ಥಿಗಳಿಗೆ ಯಾವ ಸೂಚನೆಯನ್ನು ಕಳಿಸಲಾಗುವುದಿಲ್ಲ.

೧೩. ಯಾವುದೇ ಕಾರಣ ನೀಡದೇ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಹೊಂದಿದೆ. ಯಾವುದೇ ಆಡಳಿತಾತ್ಮಕ ಕಾರಣದಿಂದ ಸಂಸ್ಥೆಯು ನೀಡಿರುವ ಜಾಹಿರಾತು/ನೇಮಕವನ್ನು ರದ್ದುಪಡಿಸುವ ಹಕ್ಕನ್ನು ಹೊಂದಿದೆ. ಈ ಬಗ್ಗೆ ಯಾವುದೇ ಪತ್ರವ್ಯವಹಾರಕ್ಕೆ ಆಸ್ಪದವಿಲ್ಲ.

೧೪. ಅಭ್ಯರ್ಥಿಗಳು ಸ್ವಂತ ಖರ್ಚಿನಲ್ಲಿಯೇ ಲಿಖಿತ ಪರೀಕ್ಷೆಗೆ ಹಾಜರಾಗಬೇಕು.

೧೫. ಅಭ್ಯರ್ಥಿಗಳು ಸಲ್ಲಿಸಿರುವ ದಾಖಲಾತಿಗಳ ಪೂರ್ವಾಪರಗಳನ್ನು ಪರಿಶೀಲಿಸುವ ಹಕ್ಕು ಸಂಸ್ಥೆಗಿದೆ. ನೇಮಕಾತಿಯ ನಂತರ ಅವರು ಸಲ್ಲಿಸಿರುವ ದಾಖಲಾತಿಗಳು ನೈಜವಲ್ಲ ಎಂದು ಕಂಡುಬಂದ ಸಂದರ್ಭದಲ್ಲಿ ಸೂಕ್ತ ಪ್ರಕ್ರಿಯೆ ಜರುಗಿಸಿ ಅವರ ಸೇವೆಯನ್ನು ಅಂತ್ಯಗೊಳಿಸಲಾಗುವುದು ಮತ್ತು ಶಿಸ್ತುಕ್ರಮ/ಅಪರಾಧಿಕ (ಕ್ರಿಮಿನಲ್) ಕ್ರಮಗಳನ್ನು ಕೈಗೊಳ್ಳಲಾಗುವುದು.

೧೬. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ನೇಮಕಾತಿಯ ಪೋರ್ಟಲ್ಲನ್ನು ೧೧.೧೦.೨೦೨೦ ರಿಂದ ೦೭.೧೧.೨೦೨೦ವರೆಗೆ ತೆರೆಯಲಾಗಿದೆ.

ಆಸಕ್ತರು ಅಧಿಸೂಚನೆ ಮತ್ತಿತರ ವಿವರಗಳಿಗಾಗಿ ಸಂಸ್ಥೆಯ https://iisc.ac.in/positions-open ಜಾಲತಾಣವನ್ನು ನೋಡಬಹುದು.

ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ೦೬.೧೧.೨೦೨೦

ದಿನಾಂಕ: ೧೧.೧೦.೨೦೨೦ ಕುಲಸಚಿವರು

## <u>ಪರೀಕ್ಷಾ ವಿಧಾನ ಮತ್ತು ಯೋಜನೆ</u>

| | | |
|---|---|---|
| ಪತ್ರಿಕೆ ಶೈಕ್ಷಣಿಕ ಮಟ್ಟ | 10+2 ಮಟ್ಟ | |
| ಪರೀಕ್ಷೆಯ ಅವಧಿ | 1.30 ಗಂಟೆ / ಪತ್ರಿಕೆಗೆ | |
| **ವಿಭಾಗದ ಹೆಸರು** | **ಪ್ರತಿ ಪ್ರಶ್ನೆಗೆ ಅಂಕ** | **ಪ್ರಶ್ನೆಗಳ ಸಂಖ್ಯೆ** |
| ಪತ್ರಿಕೆ | | |
| ಪ್ರಮಾಣಾತ್ಮಕ ಸಾಮರ್ಥ್ಯ | 1 **ಅಂಕ** | 16 |
| ಕ್ರಿಯಾತ್ಮಕ ಸಾಮರ್ಥ್ಯ | 1 **ಅಂಕ** | 16 |
| ತಾರ್ಕಿಕ ಮತ್ತು ಸಾಂಖ್ಯಿಕ ಕಾರಣ | 1 **ಅಂಕ** | 22 |
| ಸಾಮಾನ್ಯ ಅರಿವು | 1 **ಅಂಕ** | 16 |
| ಕಂಪ್ಯೂಟರ್ ಅಪ್ಲಿಕೇಷನ್‌ಗಳ ಜ್ಞಾನ | 1 **ಅಂಕ** | 10 |
| **ಒಟ್ಟು** | | 80 |

**<u>ತಾರ್ಕಿಕ ಮತ್ತು ಸಂಖ್ಯಾತ್ಮಕ ತಾರ್ಕಿಕ ಕ್ರಿಯೆ:</u>**

ಇದು ಮೌಖಿಕ ಮತ್ತು ಮೌಖಿಕವಲ್ಲದ ಪ್ರಕಾರದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಈ ಭಾಗವು ಸಾದೃಶ್ಯಗಳು, ಹೋಲಿಕೆಗಳು ಮತ್ತು ವ್ಯತ್ಯಾಸಗಳು, ಸ್ಥಳ ದೃಶ್ಯೀಕರಣ, ಪ್ರಾದೇಶಿಕ ದೃಷ್ಟಿಕೋನ, ಸಮಸ್ಯೆ ಪರಿಹಾರ, ವಿಶ್ಲೇಷಣೆ, ತೀರ್ಪು, ನಿರ್ಧಾರ ತೆಗೆದುಕೊಳ್ಳುವಿಕೆ, ದೃಶ್ಯ ಸ್ಮರಣೆ, ವ್ಯತ್ಯಾಸ ಗುರುತಿಸುವಿಕೆ, ವೀಕ್ಷಣೆ, ಸಂಬಂಧದ ಪರಿಕಲ್ಪನೆಗಳು, ಅಂಕಗಣಿತದ ತಾರ್ಕಿಕತೆ ಮತ್ತು ಸಾಂಕೇತಿಕ ವರ್ಗೀಕರಣ, ಅಂಕಗಣಿತದ ಸರಣಿ, ಮುಂತಾದ ಪ್ರಶ್ನೆಗಳನ್ನು ಒಳಗೊಂಡಿರಲಿದೆ. ಮೌಖಿಕ ಸರಣಿ, ಕೋಡಿಂಗ್ ಮತ್ತು ಡಿಕೋಡಿಂಗ್, ಹೇಳಿಕೆ ತೀರ್ಮಾನ, ತಾರ್ಕಿಕತೆ ಇತ್ಯಾದಿ ವಿಷಯಗಳು ಶಬ್ದಾರ್ಥದ ಸಾದೃಶ್ಯ, ಸಾಂಕೇತಿಕ / ಸಾಂಖ್ಯಿಕ ಸಾದೃಶ್ಯ, ಚಿತ್ರಕ ಸಾದೃಶ್ಯ, ಲಾಕ್ಷಣಿಕ ಸರಣಿ, ಸಂಖ್ಯೆ ಸರಣಿ, ಚಿತ್ರಕ ಸರಣಿ, ಸಮಸ್ಯೆ ಪರಿಹಾರ, ಪದ ರಚನೆ, ಕೋಡಿಂಗ್ ಮತ್ತು ಡಿ-ಕೋಡಿಂಗ್, ಸಂಖ್ಯಾತ್ಮಕ ಚಟುವಟಿಕೆಗಳು, ಸಾಂಕೇತಿಕ ಕಾರ್ಯಾಚರಣೆಗಳು, ಪ್ರವೃತ್ತಿಗಳು, ಸ್ಥಳ ದೃಷ್ಟಿಕೋನ, ದೃಶ್ಯೀಕರಣ, ವೆನ್ ರೇಖಾಚಿತ್ರಗಳು, ರೇಖಾಚಿತ್ರ ನಿರ್ಣಯಗಳು, ಪಂಚ್ಡ್ ಹೋಲ್ / ಮಾದರಿ - ಮಡಿಸುವಿಕೆ ಮತ್ತು ಮೊದಲಿನಂತೆ ಮಾಡುವುದು, ಚಿತ್ರಕ ಮಾದರಿ-ಮಡಿಸುವಿಕೆ ಮತ್ತು ಪೂರ್ಣಗೊಳಿಸುವಿಕೆ, ಸೂಚ್ಯಂಕ, ವಿಳಾಸ ಹೊಂದಾಣಿಕೆ, ದಿನಾಂಕ ಮತ್ತು ನಗರ ಹೊಂದಾಣಿಕೆ, ಕೇಂದ್ರದ ವರ್ಗೀಕರಣ ಸಂಕೇತಗಳು / ರೋಲ್ ಸಂಖ್ಯೆಗಳು, ಸಣ್ಣ ಮತ್ತು ದೊಡ್ಡ ಅಕ್ಷರಗಳು / ಸಂಖ್ಯೆಗಳು ಕೋಡಿಂಗ್, ಡಿಕೋಡಿಂಗ್ ಮತ್ತು ವರ್ಗೀಕರಣ, ಎಂಬೆಡೆಡ್ ಫಿಗರ್ಸ್, ವಿಮರ್ಶಾತ್ಮಕ ಚಿಂತನೆ, ಎಮ್ ಓಷನಲ್ ಇಂಟೆಲಿಜೆನ್ಸ್, ಸೋಷಿಯಲ್ ಇಂಟೆಲಿಜೆನ್ಸ್ ಮತ್ತು ಇತರ ಉಪ ವಿಷಯಗಳು ಯಾವುದಾದರೂ ಇದ್ದರೆ ಅವುಗಳನ್ನು ಒಳಗೊಂಡಿರಲಿದೆ.

**<u>ಮೌಖಿಕ ಸಾಮರ್ಥ್ಯ:</u>**

ಈ ಭಾಗದಲ್ಲಿನ ಪ್ರಶ್ನೆಗಳು ಅಭ್ಯರ್ಥಿಯ ಇಂಗ್ಲಿಷ್ ಭಾಷೆಯ ತಿಳುವಳಿಕೆ ಮತ್ತು ಜ್ಞಾನವನ್ನು ಪರೀಕ್ಷಿಸಲು ವಿನ್ಯಾಸಗೊಳಿಸಲಾಗಿರುತ್ತದೆ. ತಪ್ಪುಗಳನ್ನು ಗುರುತಿಸುವಿಕೆ, ಖಾಲಿ ಜಾಗ ಭರ್ತಿ ಮಾಡುವುದು, ಸಮಾನಾರ್ಥಕ, ವಿರುದ್ಧಾರ್ಥಕಗಳು, ಕಾಗುಣಿತ / ತಪ್ಪಾಗಿ ಉಚ್ಚರಿಸಲಾದ ಪದಗಳು, ಭಾಷಾವೈಶಿಷ್ಟ್ಯಗಳು ಮತ್ತು ನುಡಿಗಟ್ಟುಗಳು; ಒಂದು ಪದದ ಪರ್ಯಾಯ; ವಾಕ್ಯಗಳ ಸುಧಾರಣೆ, ಕ್ರಿಯಾಪದಗಳು, ಸಕ್ರಿಯ / ನಿಷ್ಕ್ರಿಯ ವಾಕ್ಯರಚನೆ, ನೇರ / ಪರೋಕ್ಷ ನಿರೂಪಣೆಗೆ ಪರಿವರ್ತನೆ, ವಾಕ್ಯ ಭಾಗಗಳನ್ನು ಬದಲಾಯಿಸುವುದು, ಒಂದು ವಾಕ್ಯಗುಚ್ಛದಲ್ಲಿನ ವಾಕ್ಯಗಳನ್ನು ಬದಲಾಯಿಸುವುದು ಸೇರಿದಂತೆ ಮೆಟ್ರಿಕ್ಯುಲೇಷನ್ / ಹೈಯರ್ ಸೆಕೆಂಡರಿ ಮಟ್ಟದಲ್ಲಿ ಯಾವುದೇ ಇತರ ಇಂಗ್ಲಿಷ್ ಭಾಷೆಯ ಪ್ರಶ್ನೆಗಳನ್ನು ಒಳಗೊಂಡಿರಲಿದೆ.

**ಸಾಮಾನ್ಯ ಅರಿವು:**

ಈ ಭಾಗದಲ್ಲಿನ ಪ್ರಶ್ನೆಗಳು ಅಭ್ಯರ್ಥಿಯ ಸುತ್ತಲಿನ ಪರಿಸರದ ಸಾಮಾನ್ಯ ಅರಿವು ಮತ್ತು ಸಮಾಜಕ್ಕೆ ಅದರ ಅನ್ವಯವನ್ನು ಪರೀಕ್ಷಿಸುವ ಗುರಿಯನ್ನು ಹೊಂದಿರುತ್ತದೆ. ಯಾವುದೇ ವಿದ್ಯಾವಂತ ವ್ಯಕ್ತಿಯಿಂದ ನಿರೀಕ್ಷಿಸಬಹುದಾದ ಪ್ರಚಲಿತ ಘಟನೆಗಳ ಜ್ಞಾನ ಮತ್ತು ದೈನಂದಿನ ಅವಲೋಕನಗಳು ಮತ್ತು ಅವರ ವೈಜ್ಞಾನಿಕ ಅಂಶದಲ್ಲಿನ ಅನುಭವದ ಜ್ಞಾನವನ್ನು ಪರೀಕ್ಷಿಸುವ ದೃಷ್ಟಿಯಿಂದ ಪ್ರಶ್ನೆಗಳನ್ನು ವಿನ್ಯಾಸಗೊಳಿಸಲಾಗುವುದು. ಭಾರತ ಮತ್ತು ಅದರ ನೆರೆಯ ರಾಷ್ಟ್ರಗಳಿಗೆ ಸಂಬಂಧಿಸಿದ ಇತಿಹಾಸ, ಸಂಸ್ಕೃತಿ, ಭೌಗೋಳಿಕತೆ, ಆರ್ಥಿಕತೆ, ಸಾಮಾನ್ಯ ನೀತಿಗಳು, ಭಾರತೀಯ ಸಂವಿಧಾನ ಹಾಗೂ ವೈಜ್ಞಾನಿಕ ಸಂಶೋಧನೆಗಳು ಮತ್ತಿತರ ಸಂಬಂಧಿಸಿದ ಪ್ರಶ್ನೆಗಳನ್ನು ಪರೀಕ್ಷೆಯು ಒಳಗೊಂಡಿರುತ್ತದೆ.

ಕಂಪ್ಯೂಟರ್ ಅಪ್ಲಿಕೇಶನ್‌ಗಳಲ್ಲಿ ಜ್ಞಾನ:

ಕಂಪ್ಯೂಟರ್ ಜ್ಞಾನ, ಕಂಪ್ಯೂಟರ್‌ನ ಗುಣಲಕ್ಷಣಗಳು, ಆರ್ ಎ ಎಂ, ಆರ್ ಒ ಎಂ, ಫೈಲ್ ಸಿಸ್ಟಮ್, ಇನ್‌ಪುಟ್ ಸಾಧನಗಳು, ಕಂಪ್ಯೂಟರ್ ಸಾಫ್ಟ್‌ವೇರ್-ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ನಡುವಿನ ಸಂಬಂಧ, ಆಪರೇಟಿಂಗ್ ಸಿಸ್ಟಮ್, ಎಂಎಸ್-ಆಫೀಸ್ (ವರ್ಡ್, ಎಕ್ಸೆಲ್ / ಸ್ಪ್ರೆಡ್ ಶೀಟ್ , ಪವರ್ ಪಾಯಿಂಟ್), ಮಾಹಿತಿ ತಂತ್ರಜ್ಞಾನ ಮತ್ತು ಸೊಸೈಟಿ-ಇಂಡಿಯನ್ ಐಟಿ ಕಾನೂನು, ಡಿಜಿಟಲ್ ಸಿಗ್ನೇಚರ್ಸ್, ಇ-ಆಡಳಿತಕ್ಕಾಗಿ ಸರ್ಕಾರದಲ್ಲಿ ಮಾಹಿತಿ ತಂತ್ರಜ್ಞಾನದ ಅಪ್ಲಿಕೇಶನ್, ಮಾಹಿತಿ ಕಿಯೋಸ್ಕ್ ಇತ್ಯಾದಿ.

**ಪರಿಮಾಣಾತ್ಮಕ ಸಾಮರ್ಥ್ಯ:**

ಸಂಖ್ಯೆಗಳ ಸೂಕ್ತ ಬಳಕೆಯ ಸಾಮರ್ಥ್ಯ ಮತ್ತು ಅಭ್ಯರ್ಥಿಯ ಸಂಖ್ಯಾಜ್ಞಾನವನ್ನು ಪರೀಕ್ಷಿಸುವ ಪ್ರಶ್ನೆಗಳನ್ನು ವಿನ್ಯಾಸಗೊಳಿಸಲಾಗಿರುತ್ತದೆ. ಪರೀಕ್ಷೆಯ ವ್ಯಾಪ್ತಿಯು ಶೇಕಡಾವಾರು, ಅನುಪಾತ ಮತ್ತು ಪ್ರಮಾಣ, ಸ್ಕ್ವಯರ್ ರೂಟ್ (ವರ್ಗ), ಸರಾಸರಿಗಳು, ಬಡ್ಡಿ, ಲಾಭ ಮತ್ತು ನಷ್ಟ, ರಿಯಾಯಿತಿ, ಪಾಲುದಾರಿಕೆ ವ್ಯವಹಾರ, ಸಮಯ ಮತ್ತು ದೂರ, ಸಮಯ ಮತ್ತು ಕೆಲಸ, ಶಾಲಾ ಬೀಜಗಣಿತ, ಪ್ರಾಥಮಿಕ ಬೀಜಗಣಿತ, ಪ್ರಾಥಮಿಕ ಸರ್ಡ್‌ಗಳು , ರೇಖೀಯ ಸಮೀಕರಣಗಳ ನಕ್ಷೆಗಳು, ತ್ರಿಕೋನ, ತ್ರಿಜ್ಯ, ಸ್ಪರ್ಶಕಗಳು, ವೃತ್ತದ ಜ್ಯಾಗಳಿಂದಾಗುವ ಕೋನಗಳು, ಎರಡು ಅಥವಾ ಹೆಚ್ಚಿನ ವಲಯಗಳಿಗೆ ಸಾಮಾನ್ಯ ಸ್ಪರ್ಶಕಗಳು, ತ್ರಿಕೋನ, ಚತುರ್ಭುಜಗಳು, ನಿಯಮಿತ ಬಹುಭುಜಾಕೃತಿಗಳು, ವೃತ್ತ, ಪ್ರಿಸ್ಮ್, ವೃತ್ತಾಕಾರದ ಕೋನ್, ವೃತ್ತಾಕಾರದ ಸಿಲಿಂಡರ್, ಚೌಕ, ಅರ್ಧಗೋಳಗಳು, ತ್ರಿಕೋನ ಅಥವಾ ಚತುಷ್ಕೋನದ ತಳ ಹೊಂದಿರುವ ಪಿರಮಿಡ್, ತ್ರಿಕೋನಮಿತಿ ಅನುಪಾತ, ಡಿಗ್ರಿ ಮತ್ತು ರೇಡಿಯನ್ ಅಳತೆಗಳು, ಪ್ರಮಾಣಿತ ಗುರುತುಗಳು, ಪೂರಕ ಕೋನಗಳು, ಎತ್ತರ ಮತ್ತು ದೂರ, ಹಿಸ್ಟೋಗ್ರಾಮ್, ಆವರ್ತನ ಬಹುಭುಜಾಕೃತಿ, ಬಾರ್ ರೇಖಾಚಿತ್ರ, ಪೈ ನಕ್ಷೆ ಮತ್ತು ಮೆಟ್ರಿಕ್ಯುಲೇಷನ್ ಮಟ್ಟದ ಯಾವುದೇ ಪ್ರಶ್ನೆಗಳು ಇರಲಿವೆ.

//